# ಕರ್ನಾಟಕ ಸರ್ಕಾರ

## ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಆಯ್ಕೆ ಪ್ರಾಧಿಕಾರ ಸಮಿತಿ ಗುಲಬರ್ಗಾ

## ಅಧಿಸೂಚನೆ

ಸಂಖ್ಯೆ:ಕಂ/ಸಿಬ್ಬಂದಿ-1/ 85 /2009-10 ದಿನಾಂಕ:26-09-2009

ಸರ್ಕಾರವು ಅಧಿಸೂಚನೆ ಸಂ/RD/299/BSC/2006 ದಿನಾಂಕ:08-09-2009ರ ಮೇರೆಗೆ ಕರ್ನಾಟಕ ಸಾಮಾನ್ಯ ಸೇವೆಗಳು(Revenue Subordinate Branches) (ವೃಂದ ಮತ್ತು ನೇಮಕಾತಿ)(ತಿದ್ದುಪಡಿ) ನಿಯಮಗಳು 2008 ಹೊರಡಿಸಿದ್ದು ಇದರ ಪ್ರಕಾರ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಮಾಡಲು ಅವಕಾಶ ಕಲ್ಪಿಸಿದೆ. ಅದರಂತೆ ಗುಲಬರ್ಗಾ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳಿಗೆ ಈ ಕೆಳಕಂಡ ಅರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ಇದಕ್ಕೆ ಲಗತ್ತಿಸಿದ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತೆ:

ಗ್ರಾಮ ಲೆಕ್ಕಿಗರ ಹುದ್ದೆಗಳಿಗೆ ಕಡ್ಡಾಯವಾಗಿ ಪಿ.ಯು.ಸಿ ಅಥವಾ ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್ ಅಥವಾ ಐಸಿಎಸ್‌ಸಿಯಿಂದ 12ನೇ ತರಗತಿ ಪಾಸಾಗಿರಬೇಕು.

1. ವಯೋಮಿತಿ.

| ವರ್ಗ | ಕನಿಷ್ಠ | ಗರಿಷ್ಠ |
|---|---|---|
| ಸಾಮಾನ್ಯ | 18 ವರ್ಷ | 35 ವರ್ಷ |
| ಇತರ ಹಿಂದುಳಿದ ವರ್ಗಗಳು | 18 ವರ್ಷ | 38 ವರ್ಷ |
| ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1 | 18 ವರ್ಷ | 40 ವರ್ಷ |

| |
|---|
| ಅಭ್ಯರ್ಥಿಯು ಮಾಜಿ ಸೈನಿಕನಾಗಿದಲ್ಲಿ ಅವನು ಸಶಸ್ತ್ರದಳಗಳಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಆ ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದ್ದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳು. |

2. ಈ ಕೆಳಗೆ ತಿಳಿಸಿರುವ ಶುಲ್ಕವನ್ನು ಡಿ.ಡಿ ಮುಖಾಂತರ ಗುಲಬರ್ಗಾದಲ್ಲಿ DEPUTY COMMISSIONER AND CHAIRMAN SELECTION COMMITTEE GULBARGA ಇವರ ಹೆಸರಿನಲ್ಲಿ ಅರ್ಜಿಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದೊಳಗಾಗಿ ತೆಗೆಯತಕ್ಕದ್ದು.

| | |
|---|---|
| ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1 ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ | ರೂ.100 |
| ಇತರ ವರ್ಗದ ಅಭ್ಯರ್ಥಿಗಳಿಗೆ | ರೂ.300 |

3. ಮೀಸಲಾತಿಗಳ ವರ್ಗೀಕರಣ

ಲಭ್ಯವಿರುವ ಹುದ್ದೆಗಳು (114)

| ವರ್ಗ | ಸಾಮಾನ್ಯ ಅಭ್ಯರ್ಥಿ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಪ್ರವರ್ಗ-I | II-ಎ | II-ಬಿ | III-ಎ | III-ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 11 | 03 | 01 | 01 | 03 | 01 | 01 | 01 | 22 |
| ಮಹಿಳಾ ಅಭ್ಯರ್ಥಿ | 17 | 05 | 01 | 02 | 05 | 02 | 01 | 02 | 35 |
| ಮಾಜಿ ಸೈನಿಕ | 05 | 01 | - | - | 01 | - | - | - | 07 |
| ಅಂಗವಿಕಲ | 03 | 01 | 01 | 01 | 01 | 01 | 01 | 01 | 10 |
| ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ | 03 | 01 | - | - | 01 | - | - | - | 05 |
| ಗ್ರಾಮೀಣ ಅಭ್ಯರ್ಥಿ | 15 | 05 | 01 | 01 | 05 | 01 | 01 | 01 | 30 |
| ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ | 03 | 01 | - | - | 01 | - | - | - | 05 |
| ಒಟ್ಟು | 57 | 17 | 04 | 05 | 17 | 05 | 04 | 05 | 114 |

4. ವೇತನ ಶ್ರೇಣಿ

| ಹುದ್ದೆ | ವೇತನ ಶ್ರೇಣಿ |
|---|---|
| ಗ್ರಾಮ ಲೆಕ್ಕಿಗರು | 5800-100-6000-125-6500-150-7100-175-7800-200-8600-225-9500-250-10500 |

5. ಕನ್ನಡ ಭಾಷಾ ಜ್ಞಾನ:-

ಆಯ್ಕೆಗೊಂಡ ಅಭ್ಯರ್ಥಿಯು ಎಸ್‌ಎಸ್‌ಎಲ್‌ಸಿ ವರೆಗೆ ಅಥವಾ ಪಿಯುಸಿ ಪರೀಕ್ಷಾ ಅಥವಾ ಉನ್ನತ ವಿದ್ಯಾರ್ಹತೆಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ವ್ಯಾಸಂಗ ಮಾಡಿರತಕ್ಕದ್ದು. ಇಲ್ಲದಿದ್ದಲ್ಲಿ ಇಲಾಖೆಯು ನಡೆಸುವ ಕನ್ನಡ ಭಾಷಾ ಜ್ಞಾನದ ಪರೀಕ್ಷೆಯಲ್ಲಿ ಒಂದೇ ಅವಕಾಶದಲ್ಲಿ ಉತ್ತೀರ್ಣರಾಗತಕ್ಕದ್ದು.

6. <u>ಮೀಸಲಾತಿ:-</u>

ಜಾತಿ, ಗ್ರಾಮೀಣ, ಯೋಜನಾ ನಿರಾಶ್ರಿತರ, ಕನ್ನಡ ಮಾಧ್ಯಮ, ಮಾಜಿ ಸೈನಿಕ, ಅಂಗವಿಕಲ ಗುಂಪಿನಡಿ ಮೀಸಲಾತಿ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು, ಸರ್ಕಾರದ ಪ್ರಚಲಿತ ಆದೇಶಗಳಂತೆ ಸಂಬಂಧಪಟ್ಟ ಪ್ರಾಧಿಕಾರಿದಿಂದ ನಿಗದಿತ ನಮೂನೆಯಲ್ಲಿ ಪಡೆದ ಅರ್ಹ ಪ್ರಮಾಣ ಪತ್ರಗಳನ್ನು ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವಂತೆ ಹೊಂದಿರಬೇಕು. ಈ ಪ್ರಮಾಣ ಪತ್ರಗಳನ್ನು ಪರೀಶಿಲನಾ ಸಮಯದಲ್ಲಿ ಸಲ್ಲಿಸಿದಲ್ಲಿ ಮಾತ್ರ ಮೀಸಲಾತಿ ಸೌಲಭ್ಯಕ್ಕೆ ಅರ್ಹರಾಗುವರು. ಅರ್ಜಿ ಸ್ವೀಕರಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕ ನಂತರ ಪಡೆದಿರುವ/ಪಡಯುವ ಯಾವುದೇ ಮೀಸಲಾತಿ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.

ಆಯ್ಕೆಗೊಂಡ ಅಭ್ಯರ್ಥಿಗಳನ್ನು ಪರೀಕ್ಷಾರ್ಥ ಅವಧಿಯಲ್ಲಿ(2 ವರ್ಷ) 6 ತಿಂಗಳುಗಳು ಮೀರದಂತೆ ತರಬೇತಿಗೆ ನಿಯೋಜಿಸಲಾಗುವುದು. ಹಾಗೂ ಸರ್ಕಾರದಿಂದ ನಿಗದಿ ಪಡಿಸಿದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗತಕ್ಕದ್ದು.

7. <u>ಅರ್ಜಿಯನ್ನು ಸಲ್ಲಿಸುವ ವಿಧಾನ</u>

ನಿಗದಿತ ನಮೂನೆಯಲ್ಲಿ ಭರ್ತಿಗೊಳಿಸಿದ ಅರ್ಜಿಯನ್ನು ಲಕೋಟೆಯಲ್ಲಿ ಮೇಲೆ ತಿಳಿಸಿದಂತೆ ಅರ್ಜಿ ಶುಲ್ಕದ ಡಿ.ಡಿಯೊಂದಿಗೆ ದಿನಾಂಕ:30-10-2009 ರಂದು ಸಾಯಂಕಾಲ 5-30 ಗಂಟೆಯ ಒಳಗಾಗಿ ಈ ಕಾರ್ಯಾಲಯದಲ್ಲಿ ಸಲ್ಲಿಸತಕ್ಕದ್ದು. ಅರ್ಜಿ ಸ್ವೀಕರಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕ ನಂತರ ಬರುವ/ತಲುಪುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

8. <u>ಅರ್ಜಿಯೊಂದಿಗೆ ಲಗತ್ತಿಸ ಬೇಕಾದ ದಾಖಲೆಗಳು</u>

ಶುಲ್ಕ ಪಾವತಿಸಿದ ಬಗ್ಗೆ ಡಿ.ಡಿ.(ಡಿ.ಡಿ ಹಿಂದೆ ಅರ್ಜಿದಾರರು ತಮ್ಮ ಹೆಸರು ಹಾಗೂ ವಿಳಾಸ ಬರೆಯಬೇಕು)

**<u>ಸೂಚನೆ:-</u>** ಅರ್ಜಿಯನ್ನು ಪ್ರತ್ಯೇಕವಾಗಿ ಈ ಕಾರ್ಯಾಲಯದಿಂದ ವತರಿಸಲಾಗುವುದಿಲ್ಲ. ನಮೂನೆಯನ್ನು ದಿನ ಪತ್ರಿಕೆಯಲ್ಲಿ ರಾಜ್ಯ ಪತ್ರದಲ್ಲಿ ಅಥವಾ ಈ ಕಾರ್ಯಾಲಯದ Notice Board ದಿಂದ ಪಡೆಯಬಹುದಾಗಿದೆ.

ಸಹಿ/-
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಆಯ್ಕೆ ಪ್ರಾಧಿಕಾರ ಸಮಿತಿ, ಗುಲಬರ್ಗಾ

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಕರ್ನಾಟಕ ಸರ್ಕಾರದ ಸಚಿವಾಲಯ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ರವರಿಗೆ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
2. ಪ್ರಾದೇಶಿಕ ಆಯುಕ್ತರು, ಗುಲಬರ್ಗಾ ವಿಭಾಗ, ಗುಲಬರ್ಗಾ ರವರಿಗೆ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
3. ಉಪ ನಿರ್ದೇಶಕರು ಸರ್ಕಾರಿ ಮುದ್ರಣಾಲಯ, ಗುಲಬರ್ಗಾ ಇವರಿಗೆ ಕೊಡುತ್ತಾ ಇದನ್ನು ತಕ್ಷಣವೇ ರಾಜ್ಯ ಪತ್ರದಲ್ಲಿ (Extra Ordinary Gazette) ಪ್ರಕಟಿಸಿ ಸಾಕಷ್ಟು ಪ್ರತಿಗಳನ್ನು ಈ ಕಾಯಾಲಯಕ್ಕೆ ಒದಗಿಸಲು ಕೋರಿದೆ.
4. ಎಲ್ಲಾ ಸಹಾಯಕ ಆಯುಕ್ತರು/ ತಹಸೀಲ್ದಾರರು/ ವಿಶೇಷ ತಹಸೀಲ್ದಾರರು, ಗುಲಬರ್ಗಾ ಜಿಲ್ಲೆ ಇವರಿಗೆ ರವಾನಿಸುತ್ತಾ ತಮ್ಮ ಕಾರ್ಯಾಲಯದ Notice Board ಪ್ರಚುರಪಡಿಸಲು ಕೋರಿದೆ.
5. ಸಂಪಾದಕರು ........................................ ದಿನ ಪತ್ರಿಕೆ ಇವರಿಗೆ

ಅಪರ ಜಿಲ್ಲಾಧಿಕಾರಿಗಳು,
ಗುಲಬರ್ಗಾ